# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

**ದಿನಾಂಕ:- 21-11-2020 ರಂದು ಬೆಳಗ್ಗೆ:- 11.30 ಗಂಟೆಗೆ ಪಾಲಿಕೆಸೌಧ ವಾರ್ಡ್ ಸಂಖ್ಯೆ 128 ನಾಗರಭಾವಿಯಲ್ಲಿ ನಡೆದ ವಾರ್ಡ್ ಸಮಿತಿ ಸಭೆಯ ನಡವಳಿಗಳು.**

ಬಿ.ಬಿ.ಎಂ.ಪಿ ವ್ಯಾಪ್ತಿಯಲ್ಲಿ ಸಾರ್ವಜನಿಕರಿಗೆ ಪರಿಣಾಮಕಾರಿಯಾಗಿ ಸೇವೆಗಳನ್ನು ಒದಗಿಸುವ ನಿಟ್ಟಿನಲ್ಲಿ ಪಾಲಿಕೆಯ ವಾರ್ಡ್ ಹಂತದಲ್ಲಿ ಸಮಿತಿಗಳನ್ನು ರಚಿಸುವ ಸಲುವಾಗಿ ಮಾನ್ಯ ಆಯುಕ್ತರು, ಬಿ.ಬಿ.ಎಂ.ಪಿ ರವರ ಕಛೇರಿ ಆದೇಶದ ಸಂಖ್ಯೆ:ಬಿ12(5)/ಪಿ.ಆರ್/35/2020-21/21-09-2020ರ ಆದೇಶದಂತೆ ನೋಡೆಲ್ ಅಧಿಕಾರಿಯನ್ನಾಗಿ ಶ್ರೀ. ನಾಗರಾಜ್ ಸಿಂಗ್ರಿ, ಸಹಾಯಕ ಕಾರ್ಯಪಾಲಕ ಅಭಿಯಂತರರು, ಗೋವಿಂದರಾಜನಗರ ಉಪವಿಭಾಗ, ಬಿ.ಬಿ.ಎಂ.ಪಿ ರವರನ್ನು ನೇಮಿಸಲಾಗಿದ್ದು, ಸದರಿ ಆದೇಶದಂತೆ ವಾರ್ಡ್ ಮಟ್ಟದಲ್ಲಿ ಸಾರ್ವಜನಿಕರಿಗೆ ಪ್ರಮುಖವಾದ ಮೂಲಭೂತ ಸೌಕರ್ಯಗಳಾದ ಘನತ್ಯಾಜ್ಯ ನಿರ್ವಹಣೆ, ನೀರು ಸರಬರಾಜು ಮತ್ತು ಒಳಚರಂಡಿ ಮತ್ತು ಇನ್ನಿತರ ಕಲ್ಯಾಣ ಕಾರ್ಯಕ್ರಮಗಳಂತಹ ಹಲವಾರು ಸೌಲಭ್ಯಗಳನ್ನು ಪರಿಣಾಮಕಾರಿಯಾಗಿ ಒದಗಿಸುವ ನಿಟ್ಟಿನಲ್ಲಿ ಮತ್ತು ಪಾಲಿಕೆಯ ಹಾಗೂ ಸಾರ್ವಜನಿಕರ ನಡುವೆ ಸಮನ್ವಯ ಸಾದಿಸುವ ನಿಟ್ಟಿನಲ್ಲಿ ಪಾಲಿಕೆಯ ವಾರ್ಡ್ ಹಂತದಲ್ಲಿ ಸಮಿತಿ ಸಭೆಗೆ ಈ ಕೆಳಕಂಡ ಅಧಿಕಾರಿ ವರ್ಗ/ಸದಸ್ಯರು ಮತ್ತು ಸ್ಥಳೀಯ ನಾಗರೀಕರು ಹಾಜರಾಗಿದ್ದರು.

**ಸಭೆಗೆ ಹಾಜರಿದ್ದ ಅಧಿಕಾರಿಗಳು ಮತ್ತು ಸದಸ್ಯರು:-**

| ಕ್ರ. ಸಂ | ಹೆಸರು | ಮೊಬೈಲ್ ಸಂಖ್ಯೆ |
|---|---|---|
| 1 | ನೋಡೆಲ್ ಅಧಿಕಾರಿ<br>ಶ್ರೀ. ನಾಗರಾಜ್ ಸಿಂಗ್ರಿ, ಸಹಾಯಕ ಕಾರ್ಯಪಾಲಕ ಅಭಿಯಂತರರು,<br>ಗೋವಿಂದರಾಜನಗರ ಉಪವಿಭಾಗ, ಬಿ.ಬಿ.ಎಂ.ಪಿ, | 9945138444 |
| 2 | ಕಾರ್ಯದರ್ಶಿ ಮತ್ತು ಸಂಚಾಲಕರು<br>ಶ್ರೀ. ಮಂಜೇಗೌಡ್ರು, ಸಹಾಯಕ ಅಭಿಯಂತರರು, ವಾರ್ಡ್ ನಂ.128 | 7019520049 |
| 3 | ಶ್ರೀ ವೆಂಕಟೇಶ್ ಪಿ.ಎಸ್.ಐ ಚಂದ್ರಾಲೇಔಟ್ | |
| 4 | ಶ್ರೀ ತಿಪ್ಪೇಸ್ವಾಮಿ ಪಿ.ಎಸ್.ಐ ಚಂದ್ರಾಲೇಔಟ್ | |
| 5 | ಶ್ರೀ. ನಾಗೇಂದ್ರ Sub Inspector, ChandraLayout. | - |
| 6 | ಶ್ರೀ. ಕೃಷ್ಣಪ್ಪ, AE, BWSSB, ChandraLayout. | 8660271833 |
| 7 | ಶ್ರೀ ವಿಜಯ ಕಿರಿಯ ಆರೋಗ್ಯ ಪರಿವೀಕ್ಷಕರು | 9738630005 |
| 8 | ಶ್ರೀ. ಸಿದ್ದೇಶ್, Health Inspector, ChandraLayout. | 9480685593 |
| 9 | ಶ್ರೀಮತಿ. ಶಾರದಮ್ಮ, Revenue Inspector, ChandraLayout. | 8861794172 |
| 10 | ಶ್ರೀ ಲಕ್ಷ್ಮೀಪತಿ ಕಂದಾಯ ವಸೂಲಿಗಾರರು ಚಂದ್ರಾಬಡಾವಣೆ. | |
| 11 | ಶ್ರೀ. ಕುಮಾರ್ Accessor | |
| 12 | ಶ್ರೀ ಮಹೇಶ್ ಕೆ.ಎಸ್ ಮಾರ್ಷಲ್ | |
| 13 | ಶ್ರೀ. ರಮೇಶ್, ಕಿರಿಯ ಆರೋಗ್ಯ ಪರಿವೀಕ್ಷಕರು, ಚಂದ್ರಾಬಡಾವಣೆ. | 9206687122 |
| 14 | ಶ್ರೀ ಗಜ್ಜಾಲ ಶಂಕರ್ | |
| 15 | ಶ್ರೀ ಮಲ್ಲೇಶ್ ಸೂಪರ್‌ವೈಸರ್ | |
| 16 | ಶ್ರೀ ಸಿ.ಎಂ.ರಮೇಶ್ ಸೂಪರ್‌ವೈಸರ್ | |

*****

Scanned with CamScanner

ದಿನಾಂಕ: 21-11-2020ರಂದು ಬೆಳಿಗ್ಗೆ 11.30 ಗಂಟೆಗೆ ನಡೆಸಲಾದ ವಾರ್ಡ್ ಮಟ್ಟದ ಸಾರ್ವಜನಿಕರ ಕುಂದು ಕೊರತೆಗಳನ್ನು ನಿವಾರಿಸುವ ನಿಟ್ಟಿನಲ್ಲಿ ಮತ್ತು ಅಭಿವೃದ್ಧಿ ಕಾಮಗಾರಿಗಳನ್ನು ನಿರ್ವಹಿಸುವ ಸಂಬಂಧ ವಾರ್ಡ್ ಸಮಿತಿ ಸಭೆಯನ್ನು ಆಯೋಜಿಸಲಾಗಿ ಮೊದಲಿಗೆ ಹಾಜರಿದ್ದ, ಅಧ್ಯಕ್ಷರಿಗೆ ಸ್ವಾಗತವನ್ನು ಕೋರುತ್ತಾ ಹಾಗೂ ಸಭೆಗೆ ಹಾಜರಾದ ಎಲ್ಲಾ ಇಲಾಖೆಯ ಅಧಿಕಾರಿ ವರ್ಗದವರಿಗೆ ಮತ್ತು ಸ್ಥಳೀಯ ನಾಗರಿಕರಿಗೆ ಸ್ವಾಗತವನ್ನು ಕೋರಿ ಸಭೆಯನ್ನು ಪ್ರಾರಂಭಿಸಲಾಯಿತು.

ಸಭೆಯನ್ನು ಪ್ರಾರಂಭಿಸುತ್ತಾ, ಸದರಿ ವಾರ್ಡ್‌ನ ಎಲ್ಲಾ ಕುಂದುಕೊರತೆಗಳನ್ನು ಇಲಾಖೆವಾರು ಚರ್ಚಿಸಿ ಬಗೆಹರಿಸಿಕೊಳ್ಳಲು ಅಧ್ಯಕ್ಷರು ಸಲಹೆಯನ್ನು ನೀಡಿರುತಾರೆ, ಈ ಕುರಿತಂತೆ ಈ ಕೆಳಕಂಡ ವಿಷಯಗಳನ್ನು ಸಂಕ್ಷಿಪ್ತವಾಗಿ ಚರ್ಚಿಸಿ ಪರಿಹರಿಸುವ ಬಗ್ಗೆ ಕೈಗೊಳ್ಳುವ ಕ್ರಮಗಳ ಬಗ್ಗೆ ಅಧಿಕಾರಿಗಳಿಗೆ ನಿರ್ದೇಶನವನ್ನು ನೀಡಲಾಯಿತು.

1. **ಘನತ್ಯಾಜ್ಯ ನಿರ್ವಹಣೆ ಬಗ್ಗೆ.**

ಸಭೆಗೆ ಹಾಜರಿದ್ದ ಅಧ್ಯಕ್ಷರು ಮಾತನಾಡಿ, ಘನತ್ಯಾಜ್ಯ ನಿರ್ವಹಣೆಗೆ ಸಂಬಂಧಿಸಿದಂತೆ ವಾರ್ಡ್‌ನಲ್ಲಿರುವ ಬ್ಲಾಕ್‌ಗಳನ್ನು ನಕ್ಷೆಯಲ್ಲಿ ಗುರುತಿಸಿ ಬ್ಲಾಕ್ ಸ್ಪಾಟ್‌ಗಳಲ್ಲಿ ಕಸವನ್ನು ಎಸೆದರೆ ಫೈನ್ ಹಾಕುವುದು ಹಾಗೂ ಕಸ ಹಾಕದಂತೆ ಜಾಗೃತಿ ಮೂಡಿಸುವುದರ ಬಗ್ಗೆ ಸಂಬಂಧಪಟ್ಟವರಿಗೆ ನಿರ್ದೇಶನವನ್ನು ನೀಡಲಾಯಿತು.

ನಾಗರಭಾವಿ ವಾರ್ಡ್ ಪ್ರದೇಶದಲ್ಲಿರುವ ಎಲ್ಲಾ / ಹೋಟೆಲ್ / ಉಪಹಾರ ಮಂದಿರಗಳಲ್ಲಿ ಕಾರ್ಯನಿರ್ವಹಿಸುವ ಎಲ್ಲಾ ಸಿಬ್ಬಂದಿಗಳು ಕೋವಿಡ್-19 ಕ್ಕೆ ಸಂಬಂಧಪಟ್ಟ ಮುಂಜಾಗ್ರತೆ ಕ್ರಮಗಳಾದ ಮಾಸ್ಕ್, ಗ್ಲೌಸ್ ಧರಿಸದೇ ಕಾರ್ಯನಿರ್ವಹಿಸುತ್ತಿರುವುದು ಕಂಡುಬಂದಿದ್ದು, ಆದ ಕಾರಣ ಹೋಟೆಲ್ / ಉಪಹಾರ ಮಂದಿರಗಳ ಮಾಲೀಕರಿಗೆ ನೋಟೀಸ್ ಜಾರಿ ಮಾಡುವ ಬಗ್ಗೆ ಸಭೆಯಲ್ಲಿ ಚರ್ಚಿಸಿ ಆರೋಗ್ಯ ಅಧಿಕಾರಿಗಳು ಅಗತ್ಯ ಕ್ರಮವನ್ನು ತೆಗೆದುಕೊಳ್ಳಲು ತಿಳಿಸಲಾಯಿತು.

ವಾರ್ಡ್ ವ್ಯಾಪ್ತಿಯಲ್ಲಿ ಆಟೋ ಟಿಪ್ಪರ್ ಮತ್ತು ಕಾಂಪ್ಯಾಕ್ಟರ್ ವಾಹನಗಳ ಚಲನವಲನಗಳನ್ನು ಮ್ಯಾಪ್‌ನಲ್ಲಿ

2. **ಬಿ.ಡಬ್ಲ್ಯೂ.ಎಸ್.ಎಸ್.ಬಿ ಇಲಾಖೆ ಬಗ್ಗೆ.**

ಬಿ.ಡಬ್ಲ್ಯೂಎಸ್.ಎಸ್.ಬಿ ಇಲಾಖೆಯ ಅಭಿಯಂತರರೊಂದಿಗೆ ಮಾತನಾಡಿ ಕೆಲವೆಡೆ ಪೈಪ್ ಒಡೆದು ಹೋಗಿದ್ದು, ಅದನ್ನು ಕೂಡಲೇ ಸರಿಪಡಿಸಲು ಸೂಚಿಸಿರುತ್ತಾರೆ. ಮತ್ತು ಚೇಂಬರ್ಸ್ ಅಗಿಯುವ ಮುನ್ನ ಬಿ.ಬಿ.ಎಂ.ಪಿ ವತಿಯಿಂದ ಅನುಮತಿ ಪಡೆದು ರಸ್ತೆ ಅಗೆಯುವಂತೆ ತಿಳಿಸಿದರು.

3. **ಬೆಸ್ಕಾಂ ಇಲಾಖೆ ಬಗ್ಗೆ.**

ಬೆಸ್ಕಾಂ ಇಲಾಖೆಯಿಂದ ಯಾವುದೇ ಅಧಿಕಾರಿಗಳು ಸಭೆಗೆ ಹಾಜರಾಗದೇ ಇರುವುದನ್ನು ಗಮನಿಸಿ ಸದರಿ ಅಭಿಯಂತರರಿಗೆ ಕಾರಣ ಕೇಳಿ ಪತ್ರ ನೀಡಲು ಕ್ರಮ ವಹಿಸಲು ಸೂಚಿಸಲಾಯಿತು

4. **ಆರೋಗ್ಯ ಇಲಾಖೆ ಬಗ್ಗೆ.**

ಮದುವೆ / ಸಭೆ ಸಮಾರಂಭಗಳಲ್ಲಿ ಆರೋಗ್ಯ ಅಧಿಕಾರಿಗಳು ಕೋವಿಡ್- 19 ರ ಬಗ್ಗೆ ಕ್ರಮವಹಿಸಲು ಸೂಚಿಸಿದರು.

5. **ಕಂದಾಯ ಇಲಾಖೆ ಬಗ್ಗೆ.**

ಕಂದಾಯ ಇಲಾಖೆಯ ಅಧಿಕಾರಿಗಳೊಂದಿಗೆ ಮಾತನಾಡಿ ವಾರ್ಡಿನಲ್ಲಿ ಟ್ಯಾಕ್ಸ್ ಕಡಿಮೆಯಾಗುತ್ತಿರುವ ಬಗ್ಗೆ ಚರ್ಚಿಸಿದರು, ಹಾಗೂ ಎಲ್ಲರಿಗು ಬ್ಯಾಂಕ್‌ಗೆ ಹೋಗುವ ಬದಲು ಆನ್‌ಲೈನ್ ಪೇಮೆಂಟ್ ಮಾಡಿ ಕೋವಿಡ್-19 ನಿಂದ ರಕ್ಷಿಸಿಕೊಳ್ಳಲು ತಿಳಿಸಿದರು. ಸಾರ್ವಜನಿಕರಿಗೆ ವೋಟರ್ ಐಡಿ ಮಾಡಿಕೊಡುವ ಬಗ್ಗೆ ಯಾವುದೇ ತೊಂದರೆಯಾಗದಂತೆ ಕ್ರಮವಹಿಸಲು ಅಧಿಕಾರಿಗಳಿಗೆ ನಿರ್ದೇಶನ ನೀಡಿದರು.

Scanned with CamScanner

ಈ ಸಂಬಂಧ ಸೂಕ್ತ ಕ್ರಮ ಕೈಗೊಳ್ಳಲು ಸಂಬಂಧ ಪಟ್ಟ ಇಲಾಖೆಗೆ ತಿಳಿಸಲು ನೋಡೆಲ್ ಅಧಿಕಾರಿಗಳು ಕಾರ್ಯದರ್ಶಿ ಮತ್ತು ಸಂಚಾಲಕರು ವಾರ್ಡ್ ನಂ.128 ರವರಿಗೆ ಸೂಚಿಸಲಾಯಿತು.

ಈ ಮೇಲ್ಕಂಡ ಎಲ್ಲಾ ವಿಷಯಗಳನ್ನು ಹಾಗೂ ಸಮಸ್ಯೆಗಳನ್ನು ಬರುವ ಮುಂದಿನ ಸಭೆಯೊಳಗಾಗಿ ನಿವಾರಣೆ ಮಾಡಿ ಅನುಪಾಲನೆ ವರದಿಯನ್ನು ಸಂಬಂದಪಟ್ಟ ಅಧಿಕಾರಿಗಳು ಕಳುಹಿಸಿಕೊಡಬೇಕಾಗಿ ಈ ಮೂಲಕ ಸೂಚಿಸುತ್ತಾ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

K. Murthy

ಕಾರ್ಯದರ್ಶಿ
ಹಾಗೂ ಸಹಾಯಕ ಅಭಿಯಂತರರು
ವಾರ್ಡ್ ಸಂಖ್ಯೆ 128

ಅಧ್ಯಕ್ಷರು,
ಹಾಗೂ ಸಹಾಯಕ ಕಾರ್ಯಪಾಲಕ ಅಭಿಯಂತರರು
ಗೋವಿಂದರಾಜನಗರ ಉಪವಿಭಾಗ
ವಾರ್ಡ್ ಸಂಖ್ಯೆ 128, ನಾಗರಭಾವಿ

ಪ್ರತಿಯನ್ನು:

1) ಮಾನ್ಯ ಆಯುಕ್ತರು ರವರ ಅವಗಾಹನೆಗೆ ಸಲ್ಲಿಸಲು ಆಪ್ತ ಕಾರ್ಯಾಲಯಕ್ಕೆ ಸಲ್ಲಿಸದೆ.
2) ಮಾನ್ಯ ವಿಶೇಷ ಆಯುಕ್ತರು (ಯೋಜನೆ) ರವರ ಅವಗಾಹನೆಗೆ ಸಲ್ಲಿಸದೆ.
3) ಮಾನ್ಯ ವಿಶೇಷ ಆಯುಕ್ತರು (ಘನತ್ಯಾಜ್ಯ) ರವರ ಅವಗಾಹನೆಗೆ ಸಲ್ಲಿಸದೆ.
4) ಜಂಟಿ ಆಯುಕ್ತರು (ಪಶ್ಚಿಮ) ರವರ ಅವಗಾಹನೆಗೆ ಸಲ್ಲಿಸದೆ.
5) ಮುಖ್ಯಅಭಿಯಂತರರು (ಪಶ್ಚಿಮ) ರವರ ಅವಗಾಹನೆಗೆ ಸಲ್ಲಿಸದೆ.
6) ಅಧೀಕ್ಷಕ ಅಭಿಯಂತರರು (ಪಶ್ಚಿಮ) ರವರ ಅವಗಾಹನೆಗೆ ಸಲ್ಲಿಸದೆ.
7) ಕಾರ್ಯಪಾಲಕ ಅಭಿಯಂತರರು (ಗೋವಿಂದರಾಜನಗರ) ವಿಭಾಗರವರಿಗೆ ಸೂಕ್ತ ಕ್ರಮಕ್ಕಾಗಿ ಸಲ್ಲಿಸದೆ.

Scanned with CamScanner